**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ. 04/2019**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಪಂಚನಹಳ್ಳಿ ಪೊಲೀಸರಿಂದ

**-ವಿರುದ್ದ-**

**ಆರೋಪಿ** : ಬಸವರಾಜ ವಿ ಬಿನ್ ವೀರಭದ್ರಯ್ಯ, 30 ವರ್ಷ, ಕೆ.ಎ.18-ಟಿ.ಬಿ.2453 ಸಂಖ್ಯೆಯ ವಾಹನದ ಚಾಲಕ, ಕೂಲಿ ಕೆಲಸ, ವಕ್ಕಲಗೆರೆ ಗ್ರಾಮ, ಯಗಟಿ ಹೋಬಳಿ, ಕಡೂರು ತಾಲ್ಲೂಕು.

**-:ಆಪಾದನೆ:-**

ದಿನಾಂಕ 16-01-2018 ರಂದು ರಾತ್ರಿ 9-45 ಗಂಟೆ ಸಮಯದಲ್ಲಿ ಪಂಚನಹಳ್ಳಿ ಠಾಣಾ ವ್ಯಾಪ್ತಿಗೆ ಸೇರಿದ ಎಂ.ಕೋಡಿಹಳ್ಳಿಯಿಂದ ಚಿನಕರಹಳ್ಳಿ ಮದ್ಯೆ ಇರುವ ವಾಟರ್ ಟ್ಯಾಂಕ್ ಎದುರು ಹಾದು ಹೋಗಿರುವ ಬೆಲಗೂರು-ವಕ್ಕಲಗೆರೆ ರಸ್ತೆಯಲ್ಲಿ ಚಾ.ಸಾ.1 ರಮೇಶ ಚಾ.ಸಾ.20 ಪ್ರಸನ್ನ ಆತನ ಸಂಬಂಧಿಕರುಗಳಾದ ಮಂಜುನಾಥ ರವರು ರವಿ ಚಾಲನೆ ಮಾಡುತ್ತಿದ್ದ ಕೆ.ಎ.19/ಈಜಿ-1147 ನೇ ಮೋಟಾರು ಬೈಕಿನಲ್ಲಿ ವಕ್ಕಲಗೆರೆ ಕಡೆಯಿಂದ ಬೆಲಗೂರಿಗೆ ರಸ್ತೆಯ ಎಡಬದಿಯಲ್ಲಿ ಪ್ರಯಾಣಿಸುತ್ತಿರುವಾಗ ಆರೋಪಿಯಾದ ನೀವು ತಮ್ಮ ಬಾಬ್ತು ಕೆ.ಎ.18-ಬಿ.5423 ನೇ ಸಂಖ್ಯೆಯ ಪಿಕ್ ಅಪ್ ಗೂಡ್ಸ್ ವಾಹನದ ಚಾಲಕರಾಗಿದ್ದುಕೊಂಡು, ಸದರಿ ವಾಹನವನ್ನು ಬೆಲಗೂರು ಕಡೆಯಿಂದ ವಕ್ಕಲಗೆರೆಗ ಕಡೆಗೆ ಮಾನವ ಪ್ರಾಣಕ್ಕೆ ಅಪಾಯಕರವಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೋಟಾರ್ ಬೈಕಿಗೆ ಡಿಕ್ಕಿ ಹೊಡೆಸಿ ಅಪಘಾತವನ್ನುಂಟುಮಾಡಿರುತ್ತೀರಿ. ಅದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ

ಮಾಡಿಕೊಂಡು ಬಂದು ಮೋಟಾರ್ ಬೈಕಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಚಾ.ಸಾ.20 ಪ್ರಸನ್ನ, ಚಾ.ಸಾ.21 ಓಂಕಾರಪ್ಪ ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಲು ಕಾರಣರಾಗಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 337 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಮೋಟಾರ್ ಬೈಕಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಚಾ.ಸಾ.1 ರಮೇಶ ರವರಿಗೆ ತೀವ್ರ ಸ್ವರೂಪದ ಗಾಯಗಳು ಉಂಟಾಗಲು ಕಾರಣರಾಗಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 338 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಬೈಕಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಬೈಕ್ ಚಾಲನೆ ಮಾಡುತ್ತಿದ್ದ ರವಿ ಈತನು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಹಾಗೂ ಮಂಜುನಾಥ ಇವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ಮಾರ್ಗ ಮದ್ಯದಲ್ಲಿ ಮೃತಪಡಲು ಕಾರಣರಾಗಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿರುತ್ತದೆ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304(ಎ) ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 13 ನೇ ಮೇ 2019.

ಸಹಿ-

**(ಈರಪ್ಪ ಢವಳೇಶ್ವರ್)**
2 ನೇ ಹೆಚ್ಚುವರಿ ಪ್ರದನ್ಯಾದಂ ಕಡೂರು.